

ಮಾಡಿತ್ತು ಎಂಬ ಆರೋಪ ಒಮ್ಮೆ ಎದುರಾಗಿತ್ತು. ಆ ವಿಷಯದಲ್ಲಿ ಖುದ್ದು ಗೂಗಲ್ ಕೂಡ ಸಂಕಷ್ಟಕ್ಕೆ ಸಿಲುಕಿತ್ತೆಂಬುದು ಬೇರೆ ಮಾತು. ಜಗತ್ತಿನ ಪ್ರತಿಷ್ಠಿತರು ನೆಚ್ಚಿಕೊಂಡ ಗ್ಯಾಜೆಟ್‌ಗಳನ್ನು ಕೊಟ್ಟ ಕಂಪನಿಯ ಸಿಇಒ ಆಗಿರುವುದರಿಂದ ಟಿಮ್ ಕುಕ್ ಸಣ್ಣಪುಟ್ಟದ್ದಕ್ಕೆಲ್ಲ ಟ್ರೋಲ್‌ಗೆ ಒಳಗಾಗಿದ್ದಾರೆ. 2022ರಲ್ಲಿ ಅವರು ಯುನೈಟೆಡ್ ಸ್ಟೇಟ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್‌ನ ಕೊನೆಯ ಲ್ಯಾಪ್‌ನಲ್ಲಿ ನಿಂತು ಧ್ವಜವನ್ನು ಗಾಳಿಯಲ್ಲಿ ಆಡಿಸಬೇಕಿತ್ತು. ರೇಸ್ ಮುಕ್ತಾಯಗೊಂಡಿತು ಎನ್ನುವುದರ ಅಧಿಕೃತ ಸೂಚನೆ ಅದು. ಆಗ ಅವರು ಧ್ವಜವನ್ನು ಆಡಿಸಿದ ರೀತಿಯನ್ನು ನೋಡಿ ವೀಕ್ಷಕ ವಿವರಣೆಕಾರರೂ ವ್ಯಂಗ್ಯವಾಡಿದ್ದರು. 'ಧ್ವಜ ಆಡಿಸುವುದರಲ್ಲಿ ಇಷ್ಟೊಂದು ನಿರುತ್ಸಾಹ ತೋರಿದವರನ್ನು ನಾವು ಇದುವರೆಗೆ ನೋಡಿಯೇ ಇಲ್ಲ' ಎಂದುಬಿಟ್ಟರು. ಆ ವಿಷಯವನ್ನೇ ಇಟ್ಟುಕೊಂಡು ಅಸಂಖ್ಯ ಟ್ವಿಟರ್ ಫಾಲೋವರ್‌ಗಳು ಟಿಮ್ ಕುಕ್ ಅವರನ್ನು ಟ್ರೋಲ್ ಮಾಡಿದ್ದರು. ಸಾಮಾಜಿಕ ಜಾಲತಾಣ ನಿರ್ವಹಣೆ ಮಾಡಲೆಂದೇ ಟಿಮ್ ಕುಕ್ ತರಹದವರಿಗೆ ಅನೇಕ ಪರಿಣತರ ತಂಡವಿದೆ. ಹೀಗಾಗಿ ಅವರಿಗೆ ಮಾನಸಿಕವಾಗಿ ಕುಗ್ಗುವ ಪ್ರಮೇಯ ಬರಲಿಲ್ಲ.

ಅಡೆಲ್ ವಿಷಯದಲ್ಲಿ ಸಾಮಾಜಿಕ ಜಾಲತಾಣ ದೊಡ್ಡ ಖಳನಾಯಕನ ಪಾತ್ರವನ್ನೇ ನಿರ್ವಹಿಸಿದೆ. 2012ರಲ್ಲಿ ಅವರು ಗಂಡುಮಗುವಿಗೆ ತಾಯಿಯಾದಾಗ ಅದನ್ನು ಹಂಗಿಸಿದ್ದರು. ಮೂರು ವರ್ಷಗಳ ಹಿಂದೆ ಅವರು ತೆಳ್ಳಗಾದಾಗ ಅದನ್ನೂ ಗೇಲಿ ಮಾಡಿ, ಕಾಮೆಂಟ್‌ಗಳನ್ನು ಮಾಡಿದ್ದರು. ಅವರ ಟ್ರೈನರ್ ಪೀಟ್‌ಗೆರಾಸಿಮೊ ಆ ಕಾಲಘಟ್ಟದಲ್ಲಿ ಖುದ್ದು ಕಮೆಂಟ್‌ಗಳನ್ನು ಮಾಡಿ, ಅಡೆಲ್ ಎಷ್ಟು ಕಷ್ಟಪಟ್ಟು ತಮ್ಮ ದೇಹದ ತೂಕ ತಗ್ಗಿಸಿಕೊಂಡಿದ್ದರು ಎನ್ನುವುದನ್ನು ವಿವರವಾಗಿ ಬರೆದರು. ಯಾರೆಲ್ಲ ಅವರನ್ನು ಕೆಟ್ಟದಾಗಿ ಟೀಕಿಸಿದ್ದರೋ, ಅವರೆಲ್ಲರಿಗೂ ಪ್ರತ್ಯೇಕವಾಗಿ ಉತ್ತರಗಳನ್ನು ಕೊಟ್ಟಿದ್ದರು. 'ಫ್ಯಾಟ್—ಫೋಬಿಕ್ ಅಕ್ಯುಸೇಷನ್ಸ್' ಎಂಬ ಪದಪುಂಜಗಳನ್ನು ಬಳಸಿ, ಅಂಥ ಮನಃಸ್ಥಿತಿ ಇರುವವರಿಗೆ ನಿಜವಾಗಿಯೂ ಏನೆಲ್ಲ ತೊಂದರೆ ಇದೆ ಎಂದು ಗೆರಾಸಿಮೊ ವಿಷಯಾಂತರವನ್ನೂ ಮಾಡಿದರು. ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅವರು ಪ್ರತಿಕ್ರಿಯೆಗಳ ಮಹಾ ಅಭಿಯಾನವನ್ನೇ ಮಾಡಿ, ತಾವು ತರಬೇತಿ ನೀಡಿದ್ದ ಗಾಯಕಿಗೆ ನೆರವಿನ ಹಸ್ತ ಚಾಚಿದ್ದರು. ಇಷ್ಟೆಲ್ಲ ಬೆಂಗಾವಲಿಗೆ ಜನರಿದ್ದರೂ ಅಡೆಲ್ ವರ್ಷಗಟ್ಟಲೆ ಟ್ರೋಲ್‌ಗೆ ಒಳಗಾಗುತ್ತಲೇ ಬಂದರು. ಹಾಗೆಂದು, ಅವರು ತಮ್ಮ ಗಾಯನದಲ್ಲಿನ ವೃತ್ತಿಪರತೆ ಮುಕ್ಕಾಗಲು ಬಿಡಲಿಲ್ಲ. 16 ಗ್ರ್ಯಾಮಿ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಒಮ್ಮೆ ಪ್ರೈಮ್‌ಟೈಮ್ ಎಮ್ಮಿ ಪ್ರಶಸ್ತಿ, ಒಂದು ಸಲ ಗೋಲ್ಡನ್ ಗ್ಲೋಬ್ ಪ್ರಶಸ್ತಿಗಳೂ ಅವರಿಗೆ ಸಂದಿವೆ. ಸಂಗೀತಪ್ರಿಯರಿಗೆ ಅಡೆಲ್ ಶರೀರ ಮೂದಲಿಸಲು ಬಿಡುವಿಲ್ಲ. ಅವರ ಶಾರೀರವನ್ನು ಕೊಂಡಾಡುವ ಸಹೃದಯತೆಯೇ ಅಂಥವರಿಗೆ ಸಾಕು.

'ಅಭಿಮಾನಿಗಳು ಇರುವಂತೆ ನಿಂದಕರೂ ಇರುತ್ತಾರೆ. ಅವರನ್ನು ಅಲಕ್ಷಿಸಿ, ನಮ್ಮ ನಮ್ಮ ಕೆಲಸಗಳಲ್ಲಿ ಗಮನ ಕೇಂದ್ರೀಕರಿಸುವ ಜಾಣತನವನ್ನು ರೂಢಿಸಿಕೊಳ್ಳುವುದು ನಿಜಕ್ಕೂ ಸವಾಲು. ಅದಕ್ಕಾಗಿ ನಾನು ಸಾಕಷ್ಟು ತಲೆ ಕೆಡಿಸಿಕೊಂಡಿದ್ದೇನೆ' ಎಂದು ಅಡೆಲ್ ಹಿಂದೊಮ್ಮೆ ಹೇಳಿದ್ದರು.

ಬರೆಯುತ್ತಾ ಹೋದಷ್ಟೂ ಈ ರೀತಿ ಟ್ರೋಲ್‌ಗಳ ಎದುರು ಅಲೆಗಳಿಗೆ ಎದೆಯೊಡ್ಡಿಕೊಂಡೇ ಈಸುತ್ತಿರುವವರ ಹೆಸರುಗಳು ಮೂಡುತ್ತಲೇ ಹೋಗುತ್ತವೆ. ಜನಪ್ರಿಯರಾದ ಎಷ್ಟೋ ಜನ ಇದೇ ಕಾರಣಕ್ಕೆ ಇಂಥವುಗಳ ಗೊಡವೆಗೇ ಹೋಗದೆ, ಸಾಮಾಜಿಕ ಜಾಲತಾಣಗಳನ್ನೂ ತಮ್ಮ ಮಾರುಕಟ್ಟೆಯ ವಿಸ್ತರಣೆಯ ಭಾಗದಂತೆ ನೋಡತೊಡಗಿರುವುದು. ಕ್ರೀಸ್‌ನಲ್ಲಿ ಕೆ.ಎಲ್. ರಾಹುಲ್ ಮುಂದೆ ಗಾರ್ಡ್ ತೆಗೆದುಕೊಳ್ಳುವಾಗ ತಮ್ಮ ತಲೆಯಿಂದ ಟ್ರೋಲ್‌ನ ಕಹಿ ಅನುಭವವನ್ನು ತೊಳೆದುಕೊಂಡಿರುತ್ತಾರಾ? ನೋಡಬೇಕು.

**ಪ್ರತಿಕ್ರಿಯಿಸಿ: feedback@sudha.co.in**